5. ಗುಲ್ಬರ್ಗಾ

1. ಶ್ರೀ ದತ್ತಾತ್ರೇಯ ದೇವಸ್ಥಾನ, ಗಾಣಾಗಾಪುರ ಅಫ್ಜಲ್‌ಪುರ ತಾಲ್ಲೂಕು. ರೂ. 1,00,000.00

6. ಚಿತ್ರದುರ್ಗ

1. ಶ್ರೀ ದುರ್ಗಾಂಬಿಕಾ ದೇವಸ್ಥಾನ, ತರಾಯಕೊಂಡ ಭ್ರಮೆ ದಾವಣಗೆರೆ ತಾಲ್ಲೂಕು. ರೂ. 1,00,000.00

7. ಹೊರರಾಜ್ಯ

1. ಕರ್ನಾಟಕ ರಾಜ್ಯ ಛತ್ರ ತಿರುಮಲ-ತಿರುಪತಿ ಆಂಧ್ರ ಪ್ರದೇಶ ಇದರ ಅಭಿವೃದ್ಧಿಗಾಗಿ. ರೂ. 14,00,000.00

2. ಕರ್ನಾಟಕ ರಾಜ್ಯ ಛತ್ರ ವಾರಣಾಸಿ ಉತ್ತರ ಪ್ರದೇಶ ಇದರ ನಿರ್ಮಾಣಕ್ಕಾಗಿ. ರೂ. 5,00,000.00

**ವಿಷಯ:-** ರಾಜ್ಯದಲ್ಲಿ ಅಕ್ರಮ ಸಾಗುವಳಿಯ ಸಕ್ರಮ.

61(319)

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವವರ ಸಂಖ್ಯೆ ಎಷ್ಟು; ಜಮೀನಿನ ಒಟ್ಟು ಪ್ರದೇಶವೇನು;

ಆ) ಈ ಹಿಂದೆ ಅರ್ಜಿ ಸಲ್ಲಿಸದೆ ಇರುವವರಿಗೆ ಪುನಃ ಅರ್ಜಿ ಸಲ್ಲಿಸಲು ಸರ್ಕಾರದ ಅವಕಾಶ ನೀಡುವುದೆ; ಯಾವಾಗ ಅವಕಾಶ ನೀಡುವುದು;

ಇ) ಒಬ್ಬ ರೈತನಿಗೆ ಗರಿಷ್ಟ ಎಷ್ಟು ಎಕರೆ ಜಮೀನು ಮಂಜೂರು ಮಾಡಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) 10,86,826 ಅರ್ಜಿಗಳಿಗೆ ಸಂಬಂಧಿಸಿದಂತೆ 25,80,214 ಎಕರೆ ಜಮೀನು ಒತ್ತುವರಿಯಾಗಿರುತ್ತದೆ.

ಆ) ಸರ್ಕಾರಿ ಜಮೀನುಗಳಲ್ಲಿ ಕೃಷಿ ಉದ್ದೇಶಕ್ಕಾಗಿ ಆಗಿರುವ ಒತ್ತುವರಿಗಳನ್ನು ಸಕ್ರಮಗೊಳಿಸುವ ಯೋಜನೆಯು ದಿನಾಂಕ 20.3.1991 ರಿಂದ ಜಾರಿಗೆ ಬಂದಿದ್ದು, ಸದರಿ ಯೋಜನೆ ಅಡಿಯಲ್ಲಿ ಫಾರಂ ನಂ.50 ರ ಅರ್ಜಿಗಳನ್ನು ಸಲ್ಲಿಸಲು 6 ತಿಂಗಳ ಅವಕಾಶವನ್ನು ನೀಡಲಾಗಿತ್ತು. ಆದ್ದರಿಂದ ಮತ್ತೊಮ್ಮೆ ಕಾಲಾವಕಾಶ ನೀಡುವ ವಿಷಯವು ಸರ್ಕಾರದ ಮುಂದೆ ಇರುವುದಿಲ್ಲ.

ಇ) ಅರ್ಜಿದಾರರು ಹೊಂದಿರುವ ಜಮೀನು ಸೇರಿ ಗರಿಷ್ಟ 2 ಹೆಕ್ಟೇರ್ ಖುಷ್ಕಿ ಜಮೀನು ಅಥವಾ ಅದಕ್ಕೆ ತತ್ಸಮಾನ ತರಿ ಜಮೀನು ಮಂಜೂರು ಮಾಡಲು ಕಾನೂನಿನಲ್ಲಿ ಅವಕಾಶವಿರುತ್ತದೆ.

**ವಿಷಯ:-** ಮಾಗಡಿ ತಾಲ್ಲೂಕಿನಲ್ಲಿ ಅಸಮರ್ಪಕ ಸಾರಿಗೆ ವ್ಯವಸ್ಥೆ

62(316)

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ಖಾಸಗಿ ಬಸ್‌ಗಳು ಸಂಚರಿಸಲು ಪರವಾನಿಗೆ ನೀಡಲಾಗಿದೆ; (ಸಂಪೂರ್ಣ ವಿವರ ನೀಡುವುದು).

ಆ) ಪರವಾನಿಗೆ ಪಡೆದ ಎಲ್ಲಾ ಖಾಸಗಿ ಬಸ್ಸುಗಳು ಸಂಚರಿಸುತ್ತಿವೆಯೇ; ಪರವಾನಿಗೆ ಪಡೆದು ಸಂಚರಿಸದ ಬಸಗಳ ಸಂಖ್ಯೆ ಎಷ್ಟು; (ವಿವರ ನೀಡುವುದು).

ಇ) ಮಾಗಡಿ ತಾಲ್ಲೂಕಿನ ಹಲವಾರು ಗ್ರಾಮಾಂತರ ಕೇಂದ್ರಗಳಿಗೆ ಅಸಮರ್ಪಕ ಸಾರಿಗೆ ವ್ಯವಸ್ಥೆಯಿಂದ ತೀವ್ರ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಈ) ಈ ತೊಂದರೆ ನಿವಾರಿಸಲು ಸರ್ಕಾರಿ ಬಸ್‌ಗಳನ್ನು ಓಡಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ;

ಉ) ಈ ಸಮಸ್ಯೆ ಪರಿಹಾರಕ್ಕೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):-

ಅ) 144 (ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ)

ಆ) ಇಲ್ಲ. 76 (ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ)

ಇ) ಹೌದು.

ಈ) ಇಲ್ಲ.

ಉ) ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.